Strike by the Students of Government College of Ayurvedic Medicine in Mysore, Bellary and Belgaum.

*Q.—146. **Sri C. M. REVANA SIDDAIAH** (Siruguppa).—

Will the Government be pleased to state :—

(*a*) whether it is a fact that the 350 students of Government College of Ayurvedic Medicine studying in (i) Government College, Mysore, (ii) Taranath College, Bellary, (iii) Karnatak College, Belgaum, are on strike ;

(*b*) since how long are they on strike ;

(*c*) the reasons for strike and demands made by the students ;

(*d*) the action the Government propose to take in the matter ?

*A.—**Sri K. NAGAPPA ALVA** (Minister for Health).—

(*a*) The total strength of students in all the three colleges is only 230, and they have gone on strike.

(*b*) Since 12th January 1962.

(*c*) On the ground that their following demands have not been agreed to by Government :

1. that the G.C.A.M. Degree should be included under the Integrated Medicine of the schedule under Sec. 21 of the Mysore Ayurvedic and Unani Practitioners' Registration and Medical Practitioners' Miscellaneous Provisions Act, 1962 ;
2. that they should be posted to the District Headquarters Hospitals and other Allopathic Hospitals for clinical training ;
3. that the present syllabus of G.C.A.M. course should be revised ;
4. that the status of G.C.A.M. degree holders should be defined ;
5. that the G.C.I.M. Degree should be awarded to the G.C.A.M. students.

(*d*) The students have withdrawn the strike and have gone back to their lasses.

ಶ್ರೀ ಸಿ. ಎಂ. ರೇವಣಸಿದ್ದಯ್ಯ.—ತಾರಾನಾಥ್ ಕಾಲೇಜು ಹುಡುಗರು ಮುಷ್ಕರ ವಾಪಸು ತೆಗೆದು ಕೊಂಡರು ಎಂದು ಹೇಳಿದ್ದೀರಿ. ನೀವು ಈ ಬಗ್ಗೆ ಕೊಟ್ಟಿರತಕ್ಕ ಆಶ್ವಾಸನವೇನು ?

ಶ್ರೀ ಕೆ. ನಾಗಪ್ಪ ಆಳ್ವ.—ಅವರ ಬೇಡಿಕೆಗಳನ್ನು ಪರಿಶೀಲಿಸಿ ಎಷ್ಟರಮಟ್ಟಿಗೆ ಸರಿಪಡಿಸಲು ಸಾಧ್ಯವಿದೆ ಎಂಬುದನ್ನು ನೋಡಿ ಅದನ್ನು ಮಾಡುತ್ತೇವೆಂದು ಆಶ್ವಾಸನ ಕೊಟ್ಟಿದ್ದೇವೆ.

ಶ್ರೀ ಸಿ. ಎಂ. ರೇವಣಸಿದ್ದಯ್ಯ.—ಈ ಕೋರ್ಸು ಶುದ್ಧ ಆಯುರ್ವೇದವೆಂದು ಹೇಳಿ ಅಜ್ಜೆ ಮಧ್ಯದಲ್ಲಿ ಹೊರಡಿಸಿದರಲ್ಲಾ ಅದು ಯಾವ ತಾರೀಖಿನಲ್ಲಿ ಹೊರಡಿಸಿದ್ದು ?

ಶ್ರೀ ಕೆ. ನಾಗಪ್ಪ ಆಳ್ವ.—ಗಜೆಟಿನಲ್ಲಿ ಇನವಿಯಲ್ಲಿ prospectus ತಯಾರುಮಾಡುವುದರಲ್ಲಿ ಶುದ್ಧ ಆಯುರ್ವೇದವನ್ನು practice ಮಾಡಬೇಕೆಂಬಿದೆ. ಆದ್ದರಿಂದ ಆ ರೀತಿ ಆರ್ಡರ್ ಮಾಡಲಾಯಿತು.

ಶ್ರೀ ಸಿ. ಎಂ. ರೇವಣಸಿದ್ದಯ್ಯ.—ಸರ್ಕಾರೀ ಅಜ್ಜೆ ಶುದ್ಧ ಆಯುರ್ವೇದವೆಂದು ಹೊರಡಿಸುವುದಕ್ಕೆ ಮುಂಚಿತವಾಗಿಯೇ ಕಾಲೇಜುಗಳಲ್ಲಿ ವ್ಯಾಸಂಗ ಮಾಡತಕ್ಕ ಹುಡುಗರು ಮುಷ್ಕರದಲ್ಲಿದ್ದರೇ ಅಥವಾ ಇಲ್ಲವೇ ?

ಶ್ರೀ ಕೆ. ನಾಗಪ್ಪ ಆಳ್ವ.—ಮುಷ್ಕರದಲ್ಲಿ ಕೆಲವರು ಸೇರಿದ್ದರು.

ಶ್ರೀ ಸಿ. ಎಂ. ರೇವಣಸಿದ್ದಯ್ಯ.—ಅಂದಮೇಲೆ ಈಗ ಪ್ರಾರಂಭ ಮಾಡಿರತಕ್ಕ ಕೋರ್ಸುಗಳಲ್ಲಿ ಅಲೊಪತಿ ಕೋರ್ಸನ್ನು ಪ್ರಾಕ್ಟೀಸ್ ಮಾಡುವುದಕ್ಕೆ ವಿದ್ಯಾರ್ಥಿಗಳಿಗೆ ಹಕ್ಕು ಇದೆಯೆಂಬುದು ಸರ್ಕಾರಕ್ಕೆ ಗೊತ್ತಿದೆಯೇ ?

ಶ್ರೀ ಕೆ. ನಾಗಪ್ಪ ಆಳ್ವ.—ಈ ಬಗ್ಗೆ ಪ್ರಾಸ್ಪೆಕ್ಟಸ್ ಅಚ್ಚಾಗುವುದಕ್ಕೆ ಮೊದಲು ಇದ್ದ ವಿದ್ಯಾರ್ಥಿಗಳಿಗೆ ಅಲ್ಲದೆ, ಆಮೇಲೆ ಸೇರಿದವರಿಗೆ ಈ ಹಕ್ಕು ಇಲ್ಲ.

Sri G. DUGGAPPA.—Is it a fact that on the assurance given by the Government or responsible authorities in the Government that the students withdrew their strike ?

ಶ್ರೀ ಕೆ. ನಾಗಪ್ಪ ಆಳ್ವ.—ಅದಕ್ಕೆ ಉತ್ತರ ಕೊಟ್ಟಾಗಿದೆ.

ಶ್ರೀ ಜಿ. ದುಗ್ಗಪ್ಪ.—ಹಾಗಿದ್ದರೆ ಅವರಿಗೆ ಏನು ಅಷ್ಯೂರೆನ್ಸ್ ಕೊಟ್ಟಿದ್ದೀರಿ ?

ಶ್ರೀ ಕೆ. ನಾಗಪ್ಪ ಆಳ್ವ.—ನ್ಯಾಯವಾಗಿ ಅವರ ಬೇಡಿಕೆಗಳನ್ನು ಪರಿಶೀಲಿಸಿ ಅವಕ್ಕೆ ಬೇಕಾದ ಏರ್ಪಾಡು ಮಾಡಿದ್ದೇವೆಂಬ ಆಶ್ವಾಸನೆಯನ್ನು ಕೊಟ್ಟಿದ್ದೇವೆ.

ಶ್ರೀ ಜಿ. ದುಗ್ಗಪ್ಪ.—ಅವರ ಬೇಡಿಕೆಗಳು ಸರ್ಕಾರದ ಮುಂದೆ ಇರುವುದರಿಂದ ಅವೆಲ್ಲವೂ ನ್ಯಾಯವಾಗಿವೆಯೇ ಇಲ್ಲವೇ ಎಂಬುದನ್ನು ಸರ್ಕಾರ ಈಗಾಗಲೇ ಪರಿಶೀಲಿಸಿದೆಯೇ ?

ಶ್ರೀ ಕೆ. ನಾಗಪ್ಪ ಆಳ್ವ.—ಅವು ಇನ್ನೂ ಸರ್ಕಾರದ ಪರಿಶೀಲನೆಯಲ್ಲಿವೆ.

ಶ್ರೀ ಜಿ. ದುಗ್ಗಪ್ಪ.—ಆ ರೀತಿ ಪರಿಶೀಲನೆ ಮಾಡುವುದಕ್ಕೆ ಸರ್ಕಾರಕ್ಕೆ ಇನ್ನೆಷ್ಟು ಕಾರಾವಕಾಶ ಬೇಕಾಗುತ್ತದೆ ?

ಶ್ರೀ ಕೆ. ನಾಗಪ್ಪ ಆಳ್ವ.—ಆದಷ್ಟು ಶೀಘ್ರವಾಗಿ ಪರಿಶೀಲನೆ ಮಾಡುತ್ತೇವೆ.

ಶ್ರೀ ಜಿ. ದುಗ್ಗಪ್ಪ.—ಸರ್ಕಾರ ಈಗಾಗಲೇ ಕೊಟ್ಟಿರತಕ್ಕ ಆಶ್ವಾಸನೆಯನ್ನು ನಂಬಿ ವಿದ್ಯಾರ್ಥಿಗಳು ಮತ್ತೆ ಪುನಃ ಕಾರೇಜಿಗೆ ಹೋಗುವುದಕ್ಕೆ ತಕ್ಕ ವ್ಯವಸ್ಥೆಗೊಳಿಸಲು ಸರ್ಕಾರಕ್ಕೆ ಇನ್ನೂ ಕಾಲ ಎಷ್ಟು ಬೇಕಾಗುತ್ತದೆ?

ಶ್ರೀ ಕೆ. ನಾಗಪ್ಪ ಆಳ್ವ.—ಅದಷ್ಟು ಜಾಗ್ರತೆಯಾಗಿ ಪರಿಶೀಲಿಸುತ್ತೇವೆಂದು ಆಗಲೇ ಉತ್ತರ ಹೇಳಿದ್ದೇನೆ.

ಶ್ರೀ ಟಿ. ಜಿ. ಸತ್ಯನಾರಾಯಣ.—ವಿದ್ಯಾರ್ಥಿಗಳು ೧೫-೧೧-೬೬ ರಿಂದ ಕೆಲವು ದಿವಸಗಳ ಕಾಲ ಸ್ಟ್ರೈಕ್ ಮಾಡಿದ್ದ ಕಾಲದಲ್ಲಿ ಅವರು ಮನೆಯಲ್ಲಿಯೇ ಕುಳಿತಿದ್ದು further studies ಮಾಡುವುದಕ್ಕೆ ಏನಾದರೂ ಸಿದ್ಧತೆಗಳನ್ನು ಮಾಡಿದ್ದೀರಾ?

ಶ್ರೀ ಕೆ. ನಾಗಪ್ಪ ಆಳ್ವ.—ಅದು ಮಾನ್ಯ ಸದಸ್ಯರ ಅಭಿಪ್ರಾಯದ ಮಾತು. ಮುಷ್ಕರವಿದ್ದ ಕಾಲ ಕೇವಲ ಜನವರಿ ೧೨ನೇ ತಾರೀಖಿನಿಂದ ಮಾರ್ಚ್ ೧೫ನೇ ತಾರೀಖಿನವರೆಗೆ ಮಾತ್ರ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸರ್ಕಾರದವರು ನ್ಯಾಯವಾದ ಬೇಡಿಕೆಗಳನ್ನು ಪುರಸ್ಕಾರ ಮಾಡುತ್ತಾರೆಂದು ತಾವು ಈಗ ತಾನೇ ಆಶ್ವಾಸನೆಯನ್ನು ಕೊಟ್ಟಿದ್ದೀರಿ. ಅಂದಮೇಲೆ ವಿದ್ಯಾರ್ಥಿಗಳು ತಮ್ಮ ಮುಂದೆ ಇಟ್ಟಿರುವ ಬೇಡಿಕೆಗಳು ಯಾವುವು? ಅವುಗಳ ಪೈಕಿ ಸರ್ಕಾರಕ್ಕೆ ಕಂಡುಬಂದಂಥ ನ್ಯಾಯವಾದ ಬೇಡಿಕೆಗಳು ಯಾವುವು?

ಶ್ರೀ ಕೆ. ನಾಗಪ್ಪ ಆಳ್ವ.—ಅವು ಇನ್ನೂ ಸರ್ಕಾರದ ಪರಿಶೀಲನೆಯಲ್ಲಿವೆ. ಕೆಲವು ವಿಚಾರಗಳನ್ನು ಮಾತ್ರ ಇನ್ನೂ ದೀರ್ಘವಾಗಿ ಪರಿಶೀಲನೆಮಾಡಬೇಕಾಗುತ್ತದೆ. ಯಾವಾಗಲೂ ಮುಷ್ಕರ ಹೂಡುವ ಸಮಯದಲ್ಲಿ ಕೇಳಿಕೆಗಳು, ಬೇಡಿಕೆಗಳು ಎಷ್ಟೋ ಇರುತ್ತವೆ. ಅವುಗಳ ಪೈಕಿ ಯಾವು ನ್ಯಾಯವಾದುವು ಎಂಬುದನ್ನು ಆಲೋಚಿಸಿರುವುದು ಸರ್ಕಾರದ ಕೆಲಸ.

Sri D. VENKATARAMIAH.—Out of the five demands, has any one of them been considered by the Government and has the Government come to a conclusion about it?

Sri K. NAGAPPA ALVA.—Not yet.

Starting of a Dairy Farm in Bhadravathi.

*Q.—153. **Sri T. D. DEVENDRAPPA** (Bhadravathi).—

Will the Government be pleased to state:—

(*a*) whether it is a fact that a sum of rupees six lakhs has been sanctioned for starting a Dairy Farm in Bhadravathi, which is an important industrial town with a population of 60,000;

(*b*) if so, the reasons for the delay in starting the Dairy Farm;

(*c*) the place that has been selected for establishing the Farm;

(*d*) when they intend to commence the work for establishing the said Farm?

A.—**Sri R. M. PATIL** (Minister for Home) [on behalf of **Sri M. V. KRISHNAPPA** (Minister for Revenue)].—

(*a*) No.

(*b*) Does not arise in view of the reply to (*a*).

(*c*) Do do

(*d*) Do do

ಶ್ರೀ ಟಿ. ಡಿ. ದೇವೇಂದ್ರಪ್ಪ.—ಅರವತ್ತು ಸಾವಿರ ಪ್ರಜಾಸಂಖ್ಯೆಯಿದ್ದು ಮುಖ್ಯ ಔದ್ಯೋಗಿಕ ನಗರವಾಗಿರುವ ಭದ್ರಾವತಿಯಲ್ಲಿ ಒಂದು ಡೈರಿಫಾರಂ ಸೊಸೈಟಿಯನ್ನು ಸ್ಥಾಪನೆ ಮಾಡಲು ಮುಂಜೂರಾತಿಯಾಗಿದ್ದರೂ ಇದುವರೆಗೆ ಅದನ್ನು ತಡಮಾಡಲು ಕಾರಣವೇನು?

ಶ್ರೀ ಆರ್. ಎಂ. ಪಾಟೀಲ್.—ಮಾನ್ಯ ಸದಸ್ಯರು ಡೈರಿ ಫಾರಂ ಸೊಸೈಟಿಯೆಂದು ತಪ್ಪು ತಿಳಿದುಕೊಂಡಿದ್ದಾರೆ. ಆದುದೇನೆಂದರೆ ಭದ್ರಾವತಿಗೆ ಒಂದು ಮಿಲ್ಕ್ ಸಪ್ಲೈ ಸ್ಕೀಂ ಮುಂಜೂರಾದುದು. ಡೈರಿ ಫಾರಂ ಅಲ್ಲ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಮಿಲ್ಕ್ ಸಪ್ಲೈ ಸ್ಕೀಮೇ ಆಗಲೀ, ಅದನ್ನಾದರೂ ಯಾವಾಗ ಸ್ಥಾಪನೆ ಮಾಡುತ್ತೀರಾ?

ಶ್ರೀ ಆರ್. ಎಂ. ಪಾಟೀಲ್.—ಅದನ್ನು ಹೇಳಬಹುದು.

Sri G. DUGGAPPA.—May I know the details of the scheme?

Sri R. M. PATIL.—The scheme was sanctioned in September 1961 and the societies are organised in some villages to collect milk. So far as the building is concerned, plans and estimates are being made ready. The Government is eager to implement the scheme.

ಶ್ರೀ ಗಂಗಾಧರನಾಮೋಷಿ.—ಚುನಾವಣೆಯ ಕಾಲದಲ್ಲಿ ಈ ರೀತಿಯಾಗಿ ಡೈರಿ ಫಾರಂಗಳನ್ನು ಸ್ಥಾಪನೆ ಮಾಡುತ್ತೇವೆಂದು ಎಷ್ಟೆಷ್ಟು ಕಡೆಗಳಲ್ಲಿ ಆಶ್ವಾಸನೆಗಳನ್ನು ಕೊಟ್ಟಿದೀರಿ? ಅವು ಯಾವಾಗ ಜಾರಿಗೆ ಬರುತ್ತವೆ?

Sri R. M. PATIL.—I think no answer is expected.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಭದ್ರಾವತಿ–ಶಿವಮೊಗ್ಗ ಮಧ್ಯೇ ಜೇಡಿಕಟ್ಟೆಯಲ್ಲಿ ಈ ಡೈರಿಫಾರಂ ಸ್ಥಾಪಿಸಬೇಕೆಂದು ಮುಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಆರ್. ಎಂ. ಪಾಟೀಲ್.—ಆ ಸ್ಥಳದಲ್ಲಲ್ಲ, ಮಾಡೇನಹಳ್ಳಿಯಲ್ಲಿ ಅದನ್ನು ಸ್ಥಾಪಿಸಬೇಕೆಂದು ಮುಂಜೂರುಮಾಡಿದ್ದು, ಅದು ಜೇಡಿಹಳ್ಳಿ. ಅಲ್ಲಿ ಅಕ್ವಿಸಿಷನ್ ಆದಚಣೆ ಬಂದದ್ದರಿಂದ ಸ್ವಲ್ಪ ತಡವಾಗಿದೆ. Meanwhile Government issued orders that pending acquisition proceedings plans and estimates may be made ready. Accordingly plans and estimates would be made ready.